ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ,

ಗೋಕಾಕ

ಸಿ.ಸಿ ನಂಃ 1148-2011

ಸಿ.ಡಬ್ಲೂ ಃ 1  ಪಿ.ಡಬ್ಲೂ ಃ 1

ಸಾಕ್ಷಿದಾರರ ಹೆಸರು ಃ- ಶಂಕರ ಗುರುಪಾದಪ್ಪಾ ಮೆನಸಿ
ವಯಸ್ಸು ಃ- 45 ವರ್ಷ
ಉದ್ಯೋಗ ಃ- ಒಕ್ಕಲುತನ
ಸಾಕೀನ ಃ- ಮಸಗುಪ್ಪಿ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆ ಮೇರೆಗೆ ದಿಃ 19-11-2014 ರಂದು ಬೋಧಿಸಲಾಯಿತು.
ಮುಖ್ಯ ವಿಚಾರಣೆ: ಸ.ಸ.ಅ. ರವರಿಂದಾ

ಆರೋಪಿ ನನಗೆ ಗೊತ್ತು. ಈಗ ಸುಮಾರು 3 ವರ್ಷಗಳ ಹಿಂದೆ 25 ಜನ ಸೇರಿ ಯೋಗಿಕೊಳ್ಳ ಮಲ್ಲಯ್ಯನಿಗೆ ಶಿವಾನಂದ ಗೋಟಡಕಿ ಇವರ ಮಗನ ಜಡಿ ತೆಗೆಸುವ ಕಾರ್ಯಕ್ರಮಕ್ಕೆ ಮಾಕ್ಸ್ ಕ್ಯಾಬ ನಂ 357 ದಲ್ಲಿ ಹೊರಟಿದ್ದೆವು. ಮಸಗುಪ್ಪಿಯಿಂದ ಬಳೋಬಾಳ ಕ್ರಾಸವರೆಗೂ ಹೋಗಿದ್ದೆವು. ಆಮೇಲೆ ಸಪ್ಪಳ ಬಂದು ನಂತರ ಗಾಡಿ ಪಲ್ಟಿ ಆಗಿ ಕೆಳಗೆ ಬಿದ್ದಿತು. 25-30 ಜನ ಎಲ್ಲರಿಗೂ ಗಾಯಗಳಾಗಿದ್ದವು. ಆಗ ಹೊಲದಲ್ಲಿರುವ ಜನ ಬಂದು ನಮ್ಮನ್ನು ಎಬ್ಬಿಸಿ ಉಪಚರಿಸಿದರು. ನನಗೆ ತಲೆಗೆ ಭುಜಕ್ಕೆ ಪೆಟ್ಟು ಹತ್ತಿತ್ತು. ಉಳಿದವರಿಗೆ ತಲೆಗೆ ಕೈಗೆ ಕಾಲುಗಳಿಗೆ ಪೆಟ್ಟು ಹತ್ತಿದ್ದವು. ನಂತರ ನಮ್ಮನ್ನು ಗೋಕಾಕದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದರು. ಕೆಲವು ಜನರನ್ನು ಉಮರಾಣಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲು ಆಗಿರುತ್ತಾರೆ. ಆದಿನ ನಮ್ಮ ವಾಹನಕ್ಕೆ ಆರೋಪಿತನು ಚಾಲಕನಾಗಿದ್ದನು. ನಾನು ನಂತರ ಚಾಲಕನ ಮೇಲೆ ಫಿರ್ಯಾದನ್ನು ಕೊಟ್ಟಿರುತ್ತೇನೆ. ಗಾಡಿಯ ಚಾಲಕ ನಾನು ಗಾಡಿಯನ್ನು ನಿಲ್ಲಿಸು ಅಂತಾ ಹೇಳಿದರೂ ನಿಲ್ಲಿಸಲಿಲ್ಲ ನಂತರ ಗಾಡಿಯು ಪಲ್ಟಿ ಆಗಿರುತ್ತದೆ. ಈ ಬಗ್ಗೆ ನಾನು ಪೋಲಿಸರಿಗೆ ಮರು ಹೇಳಿಕೆಯನ್ನು ಕೊಟ್ಟಿರುತ್ತೇನೆ. ಈಗ ಫಿರ್ಯಾದನ್ನು ನಿಪಿ 1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ 1ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಸ.ಸ.ಅ.ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

ಪಾಟೀ ಸವಾಲು ಃ ಸ.ಸ.ಅ. ರವರಿಂದ ಃ

ಸಾಕ್ಷಿಯು ಈಗ ನಿಪಿ 1 ರಲ್ಲಿ ಅ.ನಂ. 1 ರಿಂದ 28 ರವರೆಗೆ ಬರೆಸಿದ ಹೆಸರುಗಳು ಸರಿ ಇರುತ್ತವೆ ಅಂತಾ ಹೇಳುತ್ತಾರೆ, ಇನ್ನು 34 ಜನ ಇದ್ದರು ಅಂತಾ ಫಿರ್ಯಾದಿನಲ್ಲಿ ಬರೆಸಿರುತ್ತೀರಿ ಎಂದರೇ ಸರಿಯಲ್ಲ, ಸದರೀ ಅಪಘಾತವು ಅರೋಪಿಯ ಮಾನವೀಯ ಜೀವಕ್ಕೆ ಅಪಘಾತವಾಗುವ ರೀತಿಯಿಂದ ಮತ್ತು ನಿಷ್ಕಾಳಜೀತನದಿಂದ ವಾಹನವನ್ನು ಓಡಿಸಿ ರಸ್ತೆಯ ಬದಿಯಲ್ಲಿದ್ದ ತಗ್ಗಿನಲ್ಲಿ ಹಾಕಿ ಅಪಘಾತ ಮಾಡಿರುತ್ತಾನೆ ಈ ಅಪಘಾತ ಆರೋಪಿತನ ತಪ್ಪಿನಿಂದ ಆಗಿರುತ್ತದೆ ಅಂತಾ ಫಿರ್ಯಾದನಲ್ಲಿ ಬರೆಸಿರುತ್ತೇನೆ ಎಂದರೇ ಸರಿಯಲ್ಲ. ಸದರೀ ಅಪಘಾತದಲ್ಲಿ ಶಿವಾನಂದ ಶಂಕರೆಪ್ಪಾ ಗೋಟಡಕಿ ಇವರು ಸ್ಥಳದಲ್ಲಿ ಮೃತ ಪಟ್ಟಿರುತ್ತಾರೆ ಅಂತಾ ಬರೆಸಿರುತ್ತೇನೆ ಎಂದರೇ ಸರಿ. ನಾನು ನನ್ನ ಫಿರ್ಯಾದಿಯಲ್ಲಿ ಚಾಸಾ 37 ರಿಂದ 39 ಇವರು ಬಂದು ನಮಗೆ ಉಪಚರಿಸಿರುತ್ತಾರೆ ಅಂತಾ ಬರೆಸಿರುತ್ತೇನೆ ಎಂದರೇ ಸರಿ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಈ ಓ ಹೆ ಕೇ ಸರಿ ಇದೆ

ಹೆಚ್ಚುವರಿ. ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.ಗೋಕಾಕ